ಸಂಪತ್ತು ಮತ್ತು ಖ್ಯಾತಿ ಯಾವ ಮನುಷ್ಯರಲ್ಲಿ ಅಧಿಕವಾಗಿರುತ್ತದೆಯೋ ಅಂತಹವರಲ್ಲಿ ಭಯವೂ ಅಧಿಕವಾಗಿರುತ್ತದೆ. ಸಂಪತ್ತು, ಖ್ಯಾತಿ, ಜೀವ ಮುಂತಾದವುಗಳನ್ನು ಕಳೆದುಕೊಳ್ಳುವ ಆತಂಕವೇ ಭಯವಾಗಿ ರೂಪುಗೊಳ್ಳುತ್ತದೆ...' ಸಂದೀಪ್ ಕೊಚಾರನ ಮಾತುಗಳನ್ನು ಮಧ್ಯದಲ್ಲಿ ತುಂಡರಿಸುತ್ತಾ ಗುನ್ನಾಲಾಲ್ ತುಸು ನಕ್ಕು 'ಕಳೆದುಕೊಳ್ಳುವ ಭಯವೇನೂ ಅಷ್ಟಾಗಿ ನನ್ನನ್ನು ಕಾಡುತ್ತಿಲ್ಲ ಪಂಡಿತ್ ಜಿ, ನನ್ನ ಮೊಮ್ಮಗ ಎಲ್ಲಿ ಸುಖ ಶಾಂತಿಗಳನ್ನು ದಕ್ಕಿಸಿಕೊಳ್ಳುವುದಿಲ್ಲವೋ ಎಂಬ ಅನುಮಾನ ನನ್ನನ್ನು ಇತ್ತೀಚೆಗೆ ಬಲವಾಗಿ ಕಾಡುತ್ತಿದೆ. ಅದಕ್ಕೆ ಅವನಿಗೆ ಆದಷ್ಟು ಬೇಗ ಮದುವೆ ಮಾಡಿಬಿಡೋಣ ಎಂಬ ಆಲೋಚನೆ' ಎನ್ನುತ್ತಾ ಮೊಮ್ಮಗ ಆಸ್ಕರ್ ವೈಲ್ಡನ ಮತ್ತು ಭಜನ್ ಲಾಲ್ ಪುರಾನೆವಾಲೆಯ ಮಗಳು ಸಾಯಿಪ್ರಭೆಯ ಹುಟ್ಟಿದ ದಿನಾಂಕ ಹಾಗೂ ಇನ್ನಿತರ ವಿವರಗಳನ್ನು ಒಳಗೊಂಡ ಹಾಳೆಯನ್ನು ಸಂದೀಪ್ ಕೊಚಾರನ ಮುಂದಿಟ್ಟಿದ್ದ.

ಕೊಚಾರ್ ಆ ಹಾಳೆಯಲ್ಲಿನ ಅಕ್ಷರಗಳ ಮೇಲೆ ಕಿರಿದಾಗಿ ಕಣ್ಣಾಡಿಸುತ್ತಾ 'ಗುನ್ನಾಲಾಲ್ ಜಿ ಲಭ್ಯವಿರುವುದನ್ನು ಅನುಭವಿಸಲು ಸಾಧ್ಯ ಆಗದಿದ್ದರೆ ಅದು ಕಳೆದುಕೊಂಡಂತೆಯೇ ಲೆಕ್ಕ. ಮತ್ತು ಜಗತ್ತಿನಲ್ಲಿ ಯಾವೊಬ್ಬನೂ ಯಾವೊಬ್ಬ ವ್ಯಕ್ತಿಯ ಭವಿಷ್ಯವನ್ನೂ ಅತ್ಯಂತ ನಿಖರವಾಗಿ, ಕರಾರುವಕ್ಕಾಗಿ ಹೇಳಲು ಸಾಧ್ಯವಿಲ್ಲ. ಹೇಗೆ ಭೂಮಿಯ ಮೇಲೆ ಪ್ರತಿಯೊಂದು ಜೀವಿಯೂ ಬದುಕಲು ಇಂಟರ್‌ಡಿಪೆಂಡೆಂಟ್ ಆಗಿರುತ್ತವೆಯೋ ಹಾಗೆ ಸೋಲಾರ್ ಸಿಸ್ಟಂನಲ್ಲಿರುವ ಗ್ರಹಗಳು ಕೂಡ ಒಂದಕ್ಕೊಂದು ಇಂಟರ್‌ಡಿಪೆಂಡೆಂಟ್ ಆಗಿರುತ್ತವೆ. ಸೂರ್ಯ ಗ್ರಹಕ್ಕೇನಾದರೂ ಹೆಚ್ಚು ಕಡಿಮೆಯಾದರೆ ಅದರ ಸುತ್ತಲೂ ಸುತ್ತುತ್ತಿರುವ ಎಲ್ಲಾ ಗ್ರಹಗಳಿಗೂ ಗ್ರಹಚಾರ ವಕ್ಕರಿಸಿಬಿಡುತ್ತದೆ. ವಿಜ್ಞಾನ ಹಾಗೂ ದೈವತ್ವಕ್ಕೆ ನಿಲುಕದ ಎಷ್ಟೊಂದು ಅಚ್ಚರಿಗಳು ನಮ್ಮ ಮುಂದಿವೆ. ಭೂಕಂಪಗಳು, ಸುನಾಮಿಗಳು ಮುಂತಾದ ನೈಸರ್ಗಿಕ ವಿಕೋಪಗಳನ್ನು ಮುಂಚಿತವಾಗಿಯೇ ತಿಳಿದುಕೊಳ್ಳುವಲ್ಲಿ ವಿಜ್ಞಾನ ಮತ್ತು ದೈವತ್ವ ಎರಡೂ ಸೋತಿವೆ. ಎಲ್ಲಾ ಗ್ರಹಗಳೂ ತಮ್ಮ ತಮ್ಮ ಕಕ್ಷೆಗಳಲ್ಲಿ ಗಂಟೆಗೆ ಸಾವಿರಾರು ಕಿಲೋಮೀಟರ್ ವೇಗದಲ್ಲಿ ಒಂದನ್ನೊಂದು ಸಂಧಿಸದೆ ತಿರುಗುತ್ತಿವೆಯೆಂದರೆ ಸ್ಪೇಸ್‌ನ ಅಗಾಧತೆಯನ್ನು, ಅದರ ಸಂವಿಧಾನವನ್ನು ಊಹಿಸಿಕೊಳ್ಳುವುದಾದರೂ ಹೇಗೆ? ಗ್ರಹಗಳಿಂದ ಹಿಡಿದು ಜೀವವಿರುವ ಪ್ರತಿಯೊಂದು ಪ್ರಾಣಿಯೂ ಒಂದೊಂದು ಸಪರೇಟ್ ಎಂಟಿಟಿಗಳು. ಆದರೂ ಈ ಎಲ್ಲಾ ಎಂಟಿಟಿಗಳೂ ಒಂದು ನಿರ್ದಿಷ್ಟ ಚಲನೆಯಲ್ಲಿ ಸಾಗುವುದಿದೆಯಲ್ಲ...! ಇದನ್ನೇ ಭೇದಿಸಲಾಗದ ಸೃಷ್ಟಿ ರಹಸ್ಯ ಎನ್ನುವುದು. ಇಂಥ ಚಲಿಸುವ ಗ್ರಹಗಳು ಮನುಷ್ಯನೊಬ್ಬನ ಬದುಕಿನ ಮೇಲೆ ಅಥವಾ ಭವಿಷ್ಯದ ಮೇಲೆ ಹೇಗೆ ಪ್ರಭಾವ ಬೀರುತ್ತವೆ ಮತ್ತು ಹೇಗೆ ಬದುಕಿನ ಮಾರ್ಗವನ್ನು ಬದಲಿಸುತ್ತವೆ ಎಂಬುದನ್ನು ಅಸ್ಟ್ರಾಲಜಿಯ ಮೂಲಕ ತಿಳಿದುಕೊಳ್ಳುವುದು ಮತ್ತು ಅದನ್ನು ಗ್ರಾಹಕರಿಗೆ ತಿಳಿಹೇಳುವುದು ನಮ್ಮಂಥ ಅಸ್ಟ್ರಾಲಜರ್ ಕೆಲಸ! ಹಾಗಾಗಿಯೇ ಯಾವ ಅಸ್ಟ್ರಾಲಜರ್ ಕೂಡ ನಿಖರವಾಗಿ ಮತ್ತು ಕರಾರುವಕ್ಕಾಗಿ ಯಾರ ಭವಿಷ್ಯವನ್ನೂ ಹೇಳಲಿಕ್ಕೆ ಆಗುವುದಿಲ್ಲ. ಜ್ಯೋತಿಷ್ಯ ನಿಂತಿರುವುದೇ ಹೈಪೊಥೆಸಿಸ್ (**hypothesis**) ಅಂದರೆ ಕಲ್ಪನೆ ಮತ್ತು ನಂಬಿಕೆಗಳ ಆಧಾರದ ಮೇಲೆ.

ಉದಾಹರಣೆಗೆ, ಅಮೆರಿಕದ ವರ್ಲ್ಡ್ ಟ್ರೇಡ್ ಸೆಂಟರ್‌ನ ಟ್ರಾಜಿಡಿಯನ್ನೇ ತೆಗೆದುಕೊಳ್ಳೋಣ. ಅದು ಘಟಿಸುವ ಕ್ಷಣವನ್ನು ವಿಜ್ಞಾನಕ್ಕಾಗಲೀ, ಅಸ್ಟ್ರಾಲಜಿಗಾಗಲೀ ಗ್ರಹಿಸಲು ಸಾಧ್ಯವಾಗಲಿಲ್ಲ. ಈ ಮುಂಬಯಿಯೆಂಬ ರಾಕ್ಷಸ ನಗರದಲ್ಲಿ ಅದೃಷ್ಟಗಳು, ಭವಿಷ್ಯಗಳು ಕ್ಷಣ ಮಾತ್ರದಲ್ಲಿ ತಿರುಗುಮುರುಗು ಆಗಬಲ್ಲವು. ಫಿಲ್ಮ್ ಲ್ಯಾಂಡಿನ ಎಷ್ಟೊಂದು ಹೀರೋಯಿನ್‌ಗಳ ಭವಿಷ್ಯ ನಮ್ಮ ಮುಂದಿಲ್ಲ ಹೇಳಿ. ಮುಂಬಯಿಯ ಬೆಳ್ಳಿತೆರೆಯನ್ನು ಆಳಿದ ಮಧುಬಾಲ, ಮೀನಾಕುಮಾರಿ, ನರ್ಗೀಸ್, ಶ್ರೀದೇವಿಯರನ್ನೇ ತೆಗೆದುಕೊಳ್ಳಿ; ಒಂದು ಕಾಲಘಟ್ಟದಲ್ಲಿ ಹಿಂದಿ ಸಿನಿಮಾದ ಡಾರ್ಲಿಂಗ್ ಆಗಿದ್ದ ಮಧುಬಾಲ ಕೇವಲ ಮೂವತ್ತಾರು ವಯಸ್ಸಿಗೆ ಅಸುನೀಗುತ್ತಾಳೆ. ದಿಲೀಪ್ ಕುಮಾರ್ ಮತ್ತು ಕಿಶೋರ್ ಕುಮಾರ್ ಇಬ್ಬರೊಂದಿಗಿನ ಆಕೆಯ ಪ್ರೇಮ ಪ್ರಕರಣ ಎಂದಿಗೂ ಆಕೆಯ ವೈಯಕ್ತಿಕ ಬದುಕನ್ನು ಹಸನುಗೊಳಿಸಲಿಲ್ಲ. ಲಕ್ಷಾಂತರ ಜನರ ಹೃದಯಗಳನ್ನು ಕದ್ದ ಆ ಚಂದನದ ಗೊಂಬೆಯ ಹೃದಯದಲ್ಲಿ ದೇವರು ರಂಧ್ರವನ್ನು ಸೃಷ್ಟಿಸಿಬಿಟ್ಟ! ಇನ್ನು ದುರಂತ ಪಾತ್ರಗಳನ್ನು ನಿರ್ವಹಿಸುತ್ತಿದ್ದ ಮೀನಾಕುಮಾರಿಯ ಭವಿಷ್ಯವೇ ದುರಂತವಾಗಿಹೋಯಿತು. ಆಕೆ ಕುಡಿತಕ್ಕ ದಾಸಳಾಗಿ ಲಿವರ್ ಹಾಳಾಗಿ ಮೂವತ್ತೆಂಟು ವಯಸ್ಸಿಗೇ ಪ್ರಾಣ ಬಿಟ್ಟಳು. ನರ್ಗೀಸ್ ನೋವನ್ನು ಅನುಭವಿಸಿದ್ದೇ ಜಾಸ್ತಿ. ಶ್ರೀದೇವಿಯಂತೂ ಒಂದಿಷ್ಟೂ ಸುಳಿವು ನೀಡದೆ ಲೋಕ ತ್ಯಜಿಸಿದಳು. ಇವೆಲ್ಲಾ ಏಕೆ ಹೇಳುತ್ತಿರುವೆನೆಂದರೆ, ನಿಮ್ಮ ಮೊಮ್ಮಗನದು ದೇವ ಗಣವಾದರೆ ಹುಡುಗಿಯದು ರಾಕ್ಷಸ ಗಣ. ಹಾಗೆಂದು ಸುಖವಾಗಿ ಬಾಳಲು ಇದು ಅಂಥ ತೊಡಕೇನೂ ಆಗಲಾರದು. ಹಾಗೆ ನೋಡಿದರೆ ಜಗತ್ತಿನ ಮುಕ್ಕಾಲು ಪಾಲು ದಂಪತಿಗಳು ಪರಸ್ಪರ ಅಸಹನೆಯಿಂದಲೇ ಬದುಕುತ್ತಿರುತ್ತಾರೆ...' ಸಂದೀಪ್ ಕೊಚಾರ್ ಇನ್ನೂ ಮಾತನಾಡುವವನಿದ್ದ. ಅಷ್ಟರಲ್ಲಿ ಚೇಂಬರ್ ಬಾಗಿಲು ತೆರೆದುಕೊಂಡು ಹರ್ಷವರ್ಧನ್ ಶಿರೋಡ್ಕರ್ ಜೊತೆ ರಿಸೆಪ್ಷನಿಸ್ಟ್ ಒಳಬಂದಿದ್ದಳು.

ಶಿರೋಡ್ಕರ್ ಗಾಬರಿಯಿಂದ 'ಚಾಚಾ, ಭವರ್ ಫೋನ್ ಮಾಡಿದ್ದಾರೆ. ಜಿ.ಎಸ್.ಟಿ. ಜಾಯಿಂಟ್ ಕಮಿಷನರ್ ಇಪ್ಪತ್ತು ಜನ ಸಿಬ್ಬಂದಿಯೊಂದಿಗೆ ಕಂಪನಿ ಮೇಲೆ ರೈಡ್ ಮಾಡಿದ್ದಾರಂತೆ. ಹದಿನಾರು ಕೋಟಿ ಜಿ.ಎಸ್.ಟಿ. ಕಟ್ಟಬೇಕೆಂದು ಡಿಮ್ಯಾಂಡ್ ಮಾಡುತ್ತಿದ್ದಾರಂತೆ. ಭವರ್ ಲೈನಿನಲ್ಲಿದ್ದಾರೆ' ಎಂದು ಫೋನನ್ನು ಗುನ್ನಾಲಾಲನ ಕೈಗೆ ಕೊಟ್ಟಿದ್ದ. ಜಿ.ಎಸ್.ಟಿ., ಆದಾಯ ತೆರಿಗೆ ಇಲಾಖೆಯವರು ರೈಡ್ ಮಾಡುವುದು ಸಾಮಾನ್ಯ ಸಂಗತಿಯೇ. ಗುನ್ನಾಲಾಲ್ ಅನೇಕ ಸಾರಿ ಅಂತಹ ಸಂದರ್ಭಗಳನ್ನು ಎದುರಿಸಿದ್ದಾನೆ. ಬೇಕಾದಷ್ಟು ತೆರಿಗೆಯನ್ನು ಮತ್ತು ಅಧಿಕಾರಿಗಳಿಗೆ ಇನಾಮನ್ನು ಕೊಟ್ಟಿದ್ದಾನೆ. ಭವರ್ ಲಾಲ್ ರೆಡಿಮೇಡ್ಸ್ ಕಂಪನಿಯು ಮಾಡಿದ್ದ ರಫ್ತು ಮತ್ತು ಅಂತರರಾಜ್ಯ ವಹಿವಾಟನ್ನು ಸಪರೇಟಾಗಿ ತೆರಿಗೆ ಇಲಾಖೆಗೆ ಸಲ್ಲಿಸದೆ ಒಟ್ಟು ವಹಿವಾಟನ್ನು ಸಂಪೂರ್ಣ ರಫ್ತು ವಹಿವಾಟನ್ನಾಗಿ ತೋರಿಸಿ ತೆರಿಗೆ ವಿನಾಯಿತಿಯನ್ನು ಪಡೆಯಲಾಗಿತ್ತು. ಒಂದು ವೇಳೆ ಮುಂದೊಂದು ದಿನ ತೆರಿಗೆ ಇಲಾಖೆಗೆ ಗೊತ್ತಾದರೆ ತಪ್ಪು ಕ್ಲೇಮ್ ಎಂದು ತಪ್ಪೊಪ್ಪಿಕೊಂಡು ಕಟ್ಟಿದರಾಯಿತೆಂದು ಖುದ್ದು ಗುನ್ನಾಲಾಲನೇ ಆ ರೀತಿಯಾಗಿ ಮಾಡಿದ್ದ. ಹಾಗಾಗಿ ಅವನಿಗೆ ಅಂಥ ಆತಂಕವೇನೂ ಆಗಿರಲಿಲ್ಲ. ಶಿಲೋಡ್ಕರನಿಂದ ಫೋನನ್ನು ಇಸಿದುಕೊಂಡ ಗುನ್ನಾಲಾಲ್ ಪ್ರಶಾಂತತೆಯಿಂದ 'ಕಟ್ಟಿದರಾಯಿತು ಬಿಡು ಭವರ್, ನೀನೇನು ಚಿಂತೆ ಮಾಡಬೇಡ. ವ್ಯಾಪಾರದಲ್ಲಿ ಇವೆಲ್ಲ ಕಾಮನ್ ಅಲ್ವಾ. ಇನ್ನೊಂದೆರಡು ಗಂಟೆಯಲ್ಲಿ ನಾನು ಬರುತ್ತೇನೆ. ಅಲ್ಲಿಯವರೆಗೆ ಅವರಿಗೆ ಸಹಕರಿಸಿ ಹಲ್ವ, ಬಾದಾಮಿ ಹಾಲು ತರಿಸಿಕೊಡು' ಎಂದು ಶಿರೋಡ್ಕರನಿಗೆ ಫೋನ್ ವಾಪಸ್ಸು ಕೊಟ್ಟಿದ್ದ. ಸಂದೀಪ್ ಕೊಚಾರನಿಗೆ ವಿಷಯ ಸ್ವಲ್ಪ ಅರಿವಾದರೂ ಏನೆಂದು ಗುನ್ನಾಲಾಲನನ್ನು ಕೇಳಿದ್ದ. ಗುನ್ನಾಲಾಲ್ ಮೂರು ನಿಮಿಷದಲ್ಲಿ ಎಲ್ಲವನ್ನೂ ಹೇಳಿದ್ದ. ತಕ್ಷಣ ಸಂದೀಪ್ ಕೊಚಾರ್ ಇಂಟರ್ ಕಾಮ್ ಒತ್ತಿ ಪಿಎಗೆ ಜಿಎಸ್‌ಟಿ ಕಮಿಷನರ್ ವಿಕ್ರಂ ದೇಶಪಾಂಡೆಗೆ ಕನೆಕ್ಟ್ ಮಾಡಲು ಹೇಳಿದ್ದ. ಒಂದೇ ನಿಮಿಷದಲ್ಲಿ ಆ ಕಡೆಯಿಂದ ವಿಕ್ರಂ ದೇಶಪಾಂಡೆಯ ಧ್ವನಿ ಮೊಳಗಿತ್ತು.

ಸಂದೀಪ್ ಕೊಚಾರ್, 'ಹಲೊ ಸಾಹೇಬರೆ, ಗುನ್ನಾಲಾಲ್ ನಿಮ್ಮ ಹಾಗೆ ನನ್ನ ಕ್ಲಯೆಂಟ್. ನಿಮ್ಮ ಅಧಿಕಾರಿಗಳು ಅವರ ಕಂಪನಿಯ ಮೇಲೆ ರೈಡ್ ಮಾಡಿದ್ದಾರಂತೆ. ರೈಟ್ ನೌ ಗುನ್ನಾಲಾಲ್ ನನ್ನ ಮುಂದೆಯೇ ಕುಳಿತಿದ್ದಾರೆ. ಅವರಿಗೆ ಜಾಸ್ತಿ ಬರ್ಡನ್ ಮಾಡಬೇಡಿ. ಮುಂದೆ ನಿಮಗೆ ಯಾವಾಗಲಾದರೂ ಬೇಕಾಗುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ ಗುನ್ನಾಲಾಲ್ ತುಂಬಾ ಹೃದಯವಂಥ ಉದ್ಯಮಿ. ತಮ್ಮ ಕಂಪನಿಯ ಕೆಲಸಗಾರರ ಯೋಗಕ್ಷೇಮವನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಾರೆ' ಎಂದಿದ್ದ. ಆ ಕಡೆಯಿಂದ 'ಓಹ್, ಸಾರಿ ಗುರೂಜಿ. ನಮ್ಮ ಅಧಿಕಾರಿಗಳ ಟೀಮನ್ನು ವಾಪಸ್ಸು ಕರೆಸಿಕೊಳ್ಳುತ್ತೇನೆ.

ಒಮ್ಮೆ ನಿಮ್ಮ ಜೊತೆಯಲ್ಲಿಯೇ ಗುನ್ನಾಲಾಲ ಅವರೊಂದಿಗೆ ಮಾತನಾಡಿ ಆದಷ್ಟು ಕನಿಷ್ಠ ತೆರಿಗೆಯ ವಸೂಲಿಗೆ ಕ್ರಮ ಕೈಗೊಳ್ಳೋಕೆ ಪ್ರಯತ್ನ ಮಾಡ್ತೀನಿ. ಅವರ ಕಂಪನಿಯಿಂದ ರೆಗ್ಯುಲರ್ ಆಗಿ ಕೋಟ್ಯಂತರ ರೂಪಾಯಿ ತೆರಿಗೆ ನಮ್ಮ ಇಲಾಖೆಗೆ ಸಂದಾಯ ಆಗ್ತಿದೆ. ಹಿ ಈಸ್ ಎ ಪ್ರಾಂಪ್ಟ್ ಟ್ಯಾಕ್ಸ್ ಪೇಯರ್. ಆದರೂ ಇಲಾಖೆ ತನ್ನ ಆಕ್ಟಿವ್‌ನೆಸ್ ಅನ್ನು, ಅಸ್ತಿತ್ವವನ್ನು ಸಾಬೀತುಗೊಳಿಸಬೇಕಲ್ಲ. ಸದ್ಯಕ್ಕೆ ಗುನ್ನಾಲಾಲ್ ಮತ್ತು ಅವರ ಮಗ ಭವರ್ ಲಾಲರನ್ನು ನೆಮ್ಮದಿಯಿಂದ ಇರಲು ಹೇಳಿ...' ಎಂದಿದ್ದರು ಕಮಿಷನರ್.

(ಸಶೇಷ)